ಓ ಎಸ್ ನಂ. 164/2020
ಪಿ ಡಬ್ಲ್ಯೂ: 1
ದಿನಾಂಕ 23-03-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 3ನೇ ಪ್ರತಿವಾದಿ ಪರ: ಶ್ರೀ ಬಿ ಆರ್ ಹೆಚ್ ವಕೀಲರಿಂದ:

ಕಲ್ಲೇಶಪ್ಪನವರಿಗೆ ಇಬ್ಬರು ಹೆಂಡತಿಯವರು, ಅವರೆಂದರೆ ಪದ್ಮಾವತಿ ಮತ್ತು ಮೀನಾಕ್ಷಮ್ಮ. ಪದ್ಮಾವತಿಯವರಿಗೆ ಒಟ್ಟು 5 ಜನ ಮಕ್ಕಳು. ಮೀನಾಕ್ಷಮ್ಮನವರಿಗೆ ಒಬ್ಬಳೇ ಮಗಳು. ಈ ಕೇಸಿನಲ್ಲಿ ಅವರೆಲ್ಲಾರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ಕಲ್ಲೇಶಪ್ಪನವರು ಮರಣ ಹೊಂದಿ ಸುಮಾರು 10 ವರ್ಷಗಳಾಗಿರುತ್ತದೆ, ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಂದೆಯಾದ ಕಲ್ಲೇಶಪ್ಪನವರು ವ್ಯವಸಾಯ ಮಾಡುತ್ತಿದ್ದರು. ವ್ಯವಸಾಯವನ್ನು ಹೊರತು ಪಡಿಸಿ ಬೇರೆ ವ್ಯವಹಾರಗಳನ್ನು ಮಾಡುತ್ತಿದ್ದರು. ಕಲ್ಲೇಶಪ್ಪನವರು ಕೆರೆಗಳಿಗೆ ಮೀನು ಬಿಡುವುದನ್ನು ಮಾಡುತ್ತಿದ್ದರು ಎಂದರೆ ನಿಜ. ಕೆರೆಗಳನ್ನು ಗುತ್ತಿಗೆ ತೆಗೆದುಕೊಳ್ಳುತ್ತಿದ್ದರು ಎಂದರೆ ನಿಜ.

ದಾವಾ ಆಸ್ತಿಗಳಲ್ಲೆವೂ ಕಲ್ಲೇಶಪ್ಪನವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದ ಮಾಡಿರುವುದು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂಬರುಗಳನ್ನು ನನಗೆ ಹೇಳಲು ಬರುವುದಿಲ್ಲ. ದಾವೆಯನ್ನು 7-8 ಸರ್ವೆ ನಂಬರಿಗೆ ಸಂಬಂದಪಟ್ಟಂತೆ ಹಾಕಿರುತ್ತೇನೆ. ಜಮೀನುಗಳ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ದಾವೆಯಲ್ಲಿ ತೋರಿಸಲಾಗಿದೆ ಎಂದು ನುಡಿದಿರುತ್ತಾರೆ. ಮನೆಯ ಅಸೆಸ್ಮೆಂಟ್ ನಂಬರು ಮತ್ತು ಅಳತೆ ನನಗೆ

ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ದಾಖಲಾತಿ ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಗಳ ಜಮೀನುಗಳನ್ನು ಈಗ 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ. ನನ್ನ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ. ನನಗೆ ಒಡವೆಗಳನ್ನು ಕೊಟ್ಟು ನನ್ನ ಮದುವೆಯನ್ನು ಆಡಂಬರವಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಧಾರಣಾವಾಗಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.